# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 185 (236)

ಸದಸ್ಯರ ಹೆಸರು : ಶ್ರೀ ಕಿಶೋರ್ ಕುಮಾರ್ ಪುತ್ತೂರು
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 18.08.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹಲಸು ಬೆಳೆಯನ್ನು ಯಾವೆಲ್ಲ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ: ಹಲಸು ಬೆಳೆಯುವ ಒಟ್ಟು ವಿಸ್ತೀರ್ಣ ಎಷ್ಟು; ಒಟ್ಟು ಉತ್ಪಾದನೆ ಎಷ್ಟು; ಬೆಳೆಗಾರರ ಸಂಖ್ಯೆ ಎಷ್ಟು: (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಹಲಸು ಬೆಳೆಯನ್ನು ಹೆಚ್ಚಾಗಿ ಚಿಕ್ಕಮಗಳೂರು, ಹಾಸನ, ಬೆಂಗಳೂರು ಗ್ರಾಮಾಂತರ, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ; ಹಲಸು ಬೆಳೆಯ ವಿಸ್ತೀರ್ಣ-732.8 ಹೆಕ್ಟೇರ್, ಉತ್ಪಾದನೆ-29584.74 ಮೆ.ಟನ್ನು, ಬೆಳೆಗಾರರ ಸಂಖ್ಯೆ-3981.<br>ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಿದೆ. |
| ಆ) | ಹಲಸು ಬೆಳೆಗೆ ಉತ್ತೇಜನ ನೀಡುವ ಉದ್ದೇಶದಿಂದ ತೋಟಗಾರಿಕೆ ಇಲಾಖೆಯಿಂದ ಪ್ರಸ್ತುತ ಜಾರಿಯಲ್ಲಿರುವ ಯೋಜನೆಗಳು, ಸಹಾಯಧನಗಳು ಹಾಗೂ ಪ್ರೋತ್ಸಾಹಧನಗಳ ವಿವರ ನೀಡುವುದು: | ಪ್ರಸ್ತುತ ಜಾರಿಯಲ್ಲಿರುವ ಯೋಜನೆಗಳು ಕೆಳಗಿನಂತಿವೆ:<br>1) ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (MIDH) ಯೋಜನೆಯ ತೋಟಗಾರಿಕೆ ಬೆಳೆಗಳ ಹೊಸ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ಹಲಸು ಬೆಳೆಗೆ 12X 12 ಮೀ. ಅಂತರದಲ್ಲಿ ನಾಟಿ ಮಾಡಿದಾಗ ಪ್ರತಿ ಹೆಕ್ಟೇರ್‌ಗೆ ರೂ. 51,900/- ಘಟಕ ವೆಚ್ಚವಾಗಿದೆ. ಅದರ ಶೇ.40ರಷ್ಟು ಪ್ರತಿ ಹೆಕ್ಟೇರಿಗೆ ಗರಿಷ್ಠ ರೂ. 20,760 ರ ವರೆಗೆ ಸಹಾಯಧನ ನೀಡಲಾಗುತ್ತಿದೆ. ಗರಿಷ್ಠ 2 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುವುದು.<br>2) 10X 10 ಮೀ. ಅಂತರದಲ್ಲಿ ನಾಟಿ ಮಾಡಿದಾಗ ಪ್ರತಿ ಹೆಕ್ಟೇರ್‌ಗೆ ರೂ. 57,000/- ಘಟಕ ವೆಚ್ಚವಾಗಿದೆ. ಅದರ ಶೇ.40ರಷ್ಟು ಪ್ರತಿ ಹೆಕ್ಟೇರಿಗೆ ಗರಿಷ್ಠ ರೂ. 22,800 ರ ವರೆಗೆ ಸಹಾಯಧನ ನೀಡಲಾಗುತ್ತಿದೆ. ಗರಿಷ್ಠ 2 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುವುದು.<br>3) ವಿಕಸಿತ ಭಾರತ್-ಗ್ಯಾರಂಟಿ ಫಾರ್ ರೋಜ್ಗಾರ್ ಅಂಡ್ ಅಜೀವಿಕಾ ಮಿಷನ್ ಗ್ರಾಮೀಣ (ವಿಬಿ-ಜಿ ರಾಮ್ ಜಿ) ಯೋಜನೆಯಡಿ ಹಲಸು ಬೆಳೆಯ ಪ್ರದೇಶ ವಿಸ್ತರಣೆಯನ್ನು ಕೈಗೊಳ್ಳಲು 10X10 ಮೀ. ಅಂತರದಲ್ಲಿ ನಾಟಿ ಮಾಡಿದಾಗ ಕೂಲಿ ವೆಚ್ಚ ಮತ್ತು ಸಾಮಾಗ್ರಿ ವೆಚ್ಚ ಸೇರಿ ಒಟ್ಟು ರೂ. 51,227 /- ಗಳನ್ನು ನೀಡಲಾಗುತ್ತಿದೆ. |

| | | |
|---|---|---|
| | | 4)ಹಲಸು ಬೆಳೆಯ ಪ್ರದೇಶ ವಿಸ್ತರಣೆಯನ್ನು ಕೈಗೊಳ್ಳಲು 8X8 ಮೀ. ಅಂತರದಲ್ಲಿ ನಾಟಿ ಮಾಡಿದಾಗ ಕೂಲಿ ವೆಚ್ಚ ಮತ್ತು ಸಾಮಾಗ್ರಿ ವೆಚ್ಚ ಸೇರಿ ಒಟ್ಟು ರೂ. 76,860/- ಗಳನ್ನು ನೀಡಲಾಗುತ್ತಿದೆ. |
| ಇ) | ಹಲಸು ಆಧಾರಿತ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆ, ಸಂಸ್ಕರಣೆ, ಮಾರುಕಟ್ಟೆ ವ್ಯವಸ್ಥೆ ಹಾಗೂ ರಫ್ತು ಉತ್ತೇಜನಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಹಲಸು ಆಧಾರಿತ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆ, ಸಂಸ್ಕರಣೆಗೆ ಶೀತಲೀಕರಣ ಕೇಂದ್ರ ಅಥವಾ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ (RKVY) ಹಾಗೂ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (MIDH) ಯೋಜನೆಯಡಿ ಸಹಾಯಧನ ನೀಡಲಾಗುತ್ತಿದೆ.<br>1.ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ "ತೋಟಗಾರಿಕೆಯಲ್ಲಿನ ಕೊಯ್ಲೋತ್ತರ ನಿರ್ವಹಣಾ ಚಟುವಟಿಕೆಗಳಿಗೆ ಪ್ರೋತ್ಸಾಹ" ಕಾರ್ಯಕ್ರಮದಡಿ ಪೂರ್ಣ ಪ್ರಮಾಣದ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಘಟಕ ಸ್ಥಾಪಿಸಲು ತಗಲುವ ಘಟಕ ವೆಚ್ಚ ರೂ.200.00 ಲಕ್ಷಗಳಲ್ಲಿ ಶೇ.25ರಂತೆ ರೂ.50.00 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತಿದೆ.<br>2. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (MIDH) ಯೋಜನೆಯಡಿ ಪ್ರಾಥಮಿಕ ಸಂಸ್ಕರಣಾ ಘಟಕ ಸ್ಥಾಪಿಸಲು ತಗಲುವ ಘಟಕ ವೆಚ್ಚ ರೂ.35.00 ಲಕ್ಷಗಳಲ್ಲಿ ಶೇ.35 ರಂತೆ ರೂ.12.25 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. |
| ಈ) | ಕರಾವಳಿ ಭಾಗದಲ್ಲಿ ಆಯೋಜಿಸಲಾಗುತ್ತಿರುವ ಹಲಸು ಮೇಳಗಳಿಗೆ ಸರ್ಕಾರದಿಂದ ಯಾವುದೇ ಆರ್ಥಿಕ ಅಥವಾ ತಾಂತ್ರಿಕ ನೆರವು ನೀಡಲಾಗುತ್ತಿದೆಯೇ; ಇದ್ದಲ್ಲಿ, ವಿವರ ನೀಡುವುದು; | ಕರಾವಳಿ ಭಾಗದ ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಲಸು ಮೇಳಗಳನ್ನು ಆಯೋಜಿಸಲು ಸರ್ಕಾರದಿಂದ ಆರ್ಥಿಕ ಮತ್ತು ತಾಂತ್ರಿಕ ನೆರವು ನೀಡಲಾಗಿರುತ್ತದೆ.<br>1) ಉತ್ತರ ಕನ್ನಡ ಜಿಲ್ಲೆಯ ಸಿರಸಿ ಮತ್ತು ಜೋಯಿಡಾ ತಾಲ್ಲೂಕಿನಲ್ಲಿ 2024-25 ಮತ್ತು 2025-26 ನೇ ಸಾಲಿನಲ್ಲಿ ಒಟ್ಟು 5 ಮೇಳಗಳನ್ನು ಆಯೋಜಿಸಲಾಗಿದ್ದು ಜಿಲ್ಲಾ ಪಂಚಾಯತ-ಪ್ರಚಾರ ಮತ್ತು ಸಾಹಿತ್ಯ ಯೋಜನೆಯಡಿ ಒಟ್ಟು ರೂ.1.25 ಲಕ್ಷಗಳ ನೆರವನ್ನು ನೀಡಲಾಗಿದೆ.<br>2) ಉಡುಪಿ ಜಿಲ್ಲೆಯಲ್ಲಿ 2018-19 ಮತ್ತು 2022-23 ನೇ ಸಾಲಿನಲ್ಲಿ ಹಲಸು ಮೇಳಗಳನ್ನು ಆಯೋಜಿಸಲಾಗಿದ್ದು ಜಿಲ್ಲಾ ಪಂಚಾಯತ-ಪ್ರಚಾರ ಮತ್ತು ಸಾಹಿತ್ಯ ಯೋಜನೆಯಡಿ ಒಟ್ಟು ರೂ.1.50 ಲಕ್ಷಗಳ ನೆರವನ್ನು ನೀಡಲಾಗಿದೆ. 2023-24 ರಿಂದ 2025-26 ನೇ ಸಾಲಿನಲ್ಲಿ ಒಟ್ಟು 5 ಮೇಳಗಳನ್ನು ಆಯೋಜಿಸಲು ರೈತ ಸೇವಾಕೇಂದ್ರದ ಆವರಣದಲ್ಲಿ ಬಾಡಿಗೆ ಆಧಾರದಲ್ಲಿ ಸ್ಥಳಾವಕಾಶ ನೀಡಿ ರೈತರಿಗೆ ಹಾಗೂ ಉದ್ದಿಮೆದಾರರಿಗೆ ಮೇಳ ಆಯೋಜಿಸಲು ಅವಕಾಶ ಕಲ್ಪಿಸಲಾಗಿದೆ. |

| | | |
|---|---|---|
| ಉ) | ಹಲಸು ಬೆಳೆಯ ಆರ್ಥಿಕ ಮಹತ್ವವನ್ನು ಪರಿಗಣಿಸಿ, ವಿಶೇಷ 'ಹಲಸು ಅಭಿವೃದ್ಧಿ ಯೋಜನೆ' ರೂಪಿಸಿ ಬೆಳೆಗಾರರಿಗೆ ಪ್ರೋತ್ಸಾಹಧನ, ಸಂಸ್ಕರಣಾ ಘಟಕಗಳ ಸ್ಥಾಪನೆಗೆ ನೆರವು ಮಾರುಕಟ್ಟೆ ಸೌಲಭ್ಯ ಹಾಗೂ ಬ್ರ್ಯಾಂಡಿಂಗ್ ವ್ಯವಸ್ಥೆ ಕಲ್ಪಿಸುವ ಬಗ್ಗೆ ಏನಾದರೂ ಯೋಜನೆಗಳನ್ನು ಸರ್ಕಾರ ರೂಪಿಸಿದೆಯೇ: | 'ಹಲಸು ಅಭಿವೃದ್ಧಿ ಯೋಜನೆ' ರೂಪಿಸಿ ಬೆಳೆಗಾರರಿಗೆ ಪ್ರೋತ್ಸಾಹಧನ, ಸಂಸ್ಕರಣಾ ಘಟಕಗಳ ಸ್ಥಾಪನೆಗೆ ನೆರವು ಮಾರುಕಟ್ಟೆ ಸೌಲಭ್ಯ ಹಾಗೂ ಬ್ರ್ಯಾಂಡಿಂಗ್ ವ್ಯವಸ್ಥೆ ಕಲ್ಪಿಸುವ ಬಗ್ಗೆ ವಿಶೇಷ ಯೋಜನೆ ರೂಪಿಸಿರುವುದಿಲ್ಲ. |
| ಊ) | ಕರಾವಳಿ ಭಾಗದ ಹಲಸನ್ನು ವಿಶೇಷ ಕೃಷಿ-ತೋಟಗಾರಿಕಾ ಉತ್ಪನ್ನವಾಗಿ ಗುರುತಿಸಿ, ರೈತರ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಪ್ರತ್ಯೇಕ ಅನುದಾನ ಹಾಗೂ ರಾಜ್ಯಮಟ್ಟದ 'ಹಲಸು ಅಭಿವೃದ್ಧಿ ಮಂಡಳಿ' ಸ್ಥಾಪಿಸಲು ಸರ್ಕಾರ ಕ್ರಮ ವಹಿಸುವುದೇ? | ಸರ್ಕಾರದ ಮುಂದೆ ಅಂತಹ ಯಾವುದೇ ಪ್ರಸ್ತಾವನೆಗಳಿರುವುದಿಲ್ಲ. |

ಸಂಖ್ಯೆ: HORTI 428 HGM 2026

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

| ಅನುಬಂಧ-1 | | | | |
|---|---|---|---|---|
| ರಾಜ್ಯದಲ್ಲಿ ಬೆಳೆಯಲಾಗುತ್ತಿರುವ ಹಲಸು ಬೆಳೆಯ ವಿವರ | | | | |
| ಕ್ರಮ ಸಂ | ಜಿಲ್ಲೆಗಳು | ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಉತ್ಪಾದನೆ (ಮೆ.ಟನ್ನುಗಳಲ್ಲಿ) | ಬೆಳೆಗಾರರ ಸಂಖ್ಯೆ |
| 1 | ಬೆಂಗಳೂರು ನಗರ | 14 | 653 | 40 |
| 2 | ಬೆಂಗಳೂರು ಗ್ರಾಮಾಂತರ | 58 | 2762 | 56 |
| 3 | ಚಿಕ್ಕಬಳ್ಳಾಪುರ | 14 | 643 | 120 |
| 4 | ಚಿತ್ರದುರ್ಗ | 9 | 192 | 43 |
| 5 | ದಾವಣಗೆರೆ | 3 | 112 | 16 |
| 6 | ಕೋಲಾರ | 7 | 195 | 56 |
| 7 | ರಾಮನಗರ | 9 | 179 | 12 |
| 8 | ಶಿವಮೊಗ್ಗ | 36 | 1314 | 68 |
| 9 | ತುಮಕೂರು | 65 | 2689 | 162 |
| 10 | ಬೆಳಗಾವಿ | 4 | 168 | 12 |
| 11 | ಗದಗ | 2 | 83.74 | 3 |
| 12 | ಹಾವೇರಿ | 1 | 60 | 9 |
| 13 | ಉತ್ತರ ಕನ್ನಡ | 49 | 2297 | 755 |
| 14 | ಬಳ್ಳಾರಿ | 4 | 180 | 4 |
| 15 | ಕೊಪ್ಪಳ | 8 | 8 | 8 |
| 16 | ಯಾದಗಿರಿ | 1 | 40 | 6 |
| 17 | ಚಾಮರಾಜನಗರ | 7 | 294 | 15 |
| 18 | ಚಿಕ್ಕಮಗಳೂರು | 261 | 11439 | 101 |
| 19 | ದಕ್ಷಿಣ ಕನ್ನಡ | 51 | 2040 | 240 |
| 20 | ಹಾಸನ | 59 | 2342 | 230 |
| 21 | ಕೊಡಗು | 8 | 351 | 13 |
| 22 | ಮಂಡ್ಯ | 3 | 152 | 3 |
| 23 | ಮೈಸೂರು | 4 | 170 | 14 |
| 24 | ಉಡುಪಿ | 49 | 940 | 2000 |
| 25 | ವಿಜಯನಗರ | 6.80 | 281 | 8 |
| ಒಟ್ಟು | | 732.8 | 29584.74 | 3981 |